ಸ್ವಾಮಿ ಯತೀಶ್ವರಾನಂದಜಿಯವರ ಪತ್ರಗಳು



# ಪತ್ರ ಸಂಜೀವಿನೀ

ಅನುವಾದ

ಕುಮಾರಿ ಬಿ.ಆರ್.ಶುಭಾ

ಸ್ವಾಮಿ ಯತೀಶ್ವರಾನಂದಜಿಯವರು ಶ್ರೇಷ್ಠ ಅನುಭಾವಿಗಳೆಂದು ಪರಿಗಣಿಸಲ್ಪಟ್ಟವರು. ಅವರು ಆಧ್ಯಾತ್ಮಿಕ ಜೀವನಕ್ಕೆ ಸಂಬಂಧಿಸಿದ ಅನೇಕ ಗ್ರಂಥಗಳನ್ನು ಬರೆದಿರುವರು. ಅವುಗಳಲ್ಲಿ ಪ್ರಸಿದ್ಧವಾದುದು 'ಧ್ಯಾನ ಮತ್ತು ಆಧ್ಯಾತ್ಮಿಕ ಜೀವನ' (ಆಂಗ್ಲ ಮೂಲ : *Meditation and Spiritual Life*). ಅವರು ಸಾಧಕರಿಗೆ ಬರೆದ, ಕೆಲವು ಅಪ್ರಕಟಿತ ಪತ್ರಗಳನ್ನು ಇಲ್ಲಿ ಕೊಡಲಾಗಿದೆ.

ಜುರಿಚ್

ದಿನಾಂಕ ೨೩-೧೨-೧೯೩೬

ಪ್ರೀತಿಯ.....

ನಿನ್ನ ಪತ್ರವು ಸೇಂಟ್ ಮೋರಿಟ್ಜ್‌ನಲ್ಲಿನ ನನ್ನ ವಾಸ್ತವ್ಯದ ಕಡೆಯ ದಿನಗಳಲ್ಲಿ ತಲುಪಿತು. ಆ ಪತ್ರದ ಹಿಂದಿರುವ ಭಾವವನ್ನು ನಾನು ಬಹಳವಾಗಿ ಮೆಚ್ಚುತ್ತೇನೆ. 'ನಮ್ಮೆಲ್ಲರ ಆತ್ಮದ ಆತ್ಮವಾಗಿ ಅಂತರ್ಯದಲ್ಲಿ ನೆಲೆಸಿರುವ ಭಗವಂತನ ಒಂದು ಉಪಕರಣ ನೀನು' ಎಂದು ಹೆಚ್ಚು ಹೆಚ್ಚಾಗಿ ನೀನು ಅನುಭವಿಸುವಂತಾಗಲಿ ಎಂದು ಪ್ರಾರ್ಥಿಸುತ್ತೇನೆ ಮತ್ತು ಹಾರೈಸುತ್ತೇನೆ. ಕ್ಲೇಶ ಮತ್ತು ತೊಂದರೆಗಳಿಂದಲೇ ತುಂಬಿರುವ ಪ್ರಪಂಚದಲ್ಲಿ ಎಲ್ಲರಿಗೂ ಅವಶ್ಯವಾದ ಹೆಚ್ಚಿನ ಶಾಂತಿ ಮತ್ತು ಕೃಪೆಯನ್ನು ಇದು ನಿನಗೆ ನೀಡುತ್ತದೆ.

ಭಗವಂತನ ಕೃಪೆಯು ನಮ್ಮ ಎಲ್ಲ ನೋವುಗಳನ್ನೂ ದುಃಖಗಳನ್ನೂ ನಿವಾರಣೆ ಮಾಡೇ ಮಾಡುತ್ತದೆಂದೇನೂ ಇಲ್ಲ. ಆದರೆ ನಮಗೆ ಆ ಕೃಪೆಯೊಂದಿದ್ದರೆ ನಮ್ಮೊಳಗಿನ ಕಲ್ಮಷಗಳನ್ನೆಲ್ಲಾ ಭಸ್ಮವಾಗಿಸಿ ಜೀವನದ ಅಗ್ನಿಪರೀಕ್ಷೆಯಲ್ಲಿ ಯಶಸ್ವಿಯಾಗಿ ಸಾಗಲು, ಆಂತರಿಕ ಪರಿಶುದ್ಧತೆಯನ್ನು ಹೊಂದಲು ಹಾಗೂ ಭಗವಂತನ ಇಚ್ಛೆಗೆ ಹೆಚ್ಚು ಶರಣಾಗಲು ಸಮರ್ಥರಾಗುತ್ತೇವೆ. ಈ ಯಾತನೆಗಳಿಂದ ನಮಗೇನಾದರೂ ಸ್ಪಷ್ಟ ತಿಳುವಳಿಕೆ ಮತ್ತು ದೃಢ ಭಕ್ತಿ ಲಭಿಸಿದರೆ, ಆಗ ಅವು ಯಾತನೆಗಳಲ್ಲ—ಒಂದು ವರದಾನವೇ ಸರಿ.

ಆಧ್ಯಾತ್ಮಿಕ ತರಗತಿಯ ಟಿಪ್ಪಣಿಗಳನ್ನು ಅಚ್ಚುಹಾಕಿಸಲು ನೀನು ಶ್ರೀಯುತ ಕೆ.....ರವರಿಗೆ ಬಹಳ ಸಹಾಯ ಮಾಡುತ್ತಿದ್ದೀಯೆಂದು, ಅವರಿಂದಲೇ ನನಗೆ ತಿಳಿದು ಸಂತೋಷವಾಯಿತು. ಇದಕ್ಕಾಗಿ ನಿನಗೆ ತುಂಬಾ ಧನ್ಯವಾದಗಳು. ಆದರೆ ದಯವಿಟ್ಟು ನಿನಗೆ ಆಯಾಸವಾಗದಂತೆ ಎಚ್ಚರವಹಿಸು. ನಿನಗೆ ಮನೆಯಲ್ಲೂ ಹೆಚ್ಚಿನ ಕೆಲಸವಿದೆ ಮತ್ತು ನೀನು ಮುಂದಿನ ಕಾರ್ಯಗಳಿಗಾಗಿ ಹೆಚ್ಚಿನ ಶಕ್ತಿಯನ್ನು ಶೇಖರಿಸಿಟ್ಟುಕೊಳ್ಳಲೇಬೇಕು.

ಶ್ರೀಯುತ ಕೆ....ರವರು ನಿನಗೆ ***Divine Life*** ಎಂಬ ಹೊಸ ಪುಸ್ತಕವನ್ನು ನೀಡಿರಬಹುದು. ನಿನ್ನ ಪ್ರತಿದಿನದ ಅಧ್ಯಯನಕ್ಕಾಗಿ **General Meditations on the Divine** ಹಾಗೂ **Ways of the Ideal Man** ಅಧ್ಯಾಯಗಳ ಕೆಲವು ವಾಕ್ಯ ವೃಂದಗಳನ್ನು ಆ ಪುಸ್ತಕದಿಂದ ಆರಿಸಿಕೊಳ್ಳಬಹುದು. ನೀನು ***Universal Prayers*** ಎಂಬ ಪುಸ್ತಕದಿಂದಲೂ ಕೆಲವು ಪ್ರಾರ್ಥನಾ ಗೀತೆಗಳನ್ನು ಆರಿಸಿಕೊಳ್ಳಬಹುದು. ಈ ಪುಸ್ತಕದ ಪ್ರತಿಯೊಂದನ್ನು ನಿನಗೆ ನೀಡಿರುವ ಬಗ್ಗೆ ನನಗೆ ನೆನಪಿಲ್ಲ. ಅದನ್ನು ನಿನಗೆ ನೀಡಿರದ ಪಕ್ಷದಲ್ಲಿ ದಯವಿಟ್ಟು ಯಾವುದೇ ರೀತಿಯ ಸಂಕೋಚವಿಲ್ಲದೆ ನನಗೆ ಬರೆದು ತಿಳಿಸು. ಭಾರತದಿಂದ ಅದರ ಪ್ರತಿಗಳು ತಲುಪಿದೊಡನೆಯೇ ನಿನಗೆ ಕಳುಹಿಸುತ್ತೇನೆ.

ನಿನ್ನ ಸ್ವಭಾವಸಿದ್ಧವಾದ ಒಳ್ಳೆಯತನದಿಂದ ನನಗೆ ಅನೇಕ ರೀತಿಯಲ್ಲಿ ಸೇವೆ ಸಲ್ಲಿಸಲು ಪ್ರಯತ್ನಿಸಿರುವೆ. ನಿನ್ನ ಸೌಜನ್ಯಕ್ಕಾಗಿ ಧನ್ಯವಾದವನ್ನು ಅರ್ಪಿಸುತ್ತೇನೆ. ಭಗವಂತನು ಎಲ್ಲಾ ರೀತಿಯಲ್ಲೂ ನಿನ್ನನ್ನು ಆಶೀರ್ವದಿಸಲಿ.

ನೀನು ಮತ್ತು ಅಲ್ಲಿನ ಎಲ್ಲಾ ಸ್ನೇಹಿತರೂ ಆರೋಗ್ಯದಿಂದಿದ್ದೀರೆಂದು ಭಾವಿಸುತ್ತೇನೆ. ಕ್ರಿಸ್‌ಮಸ್ ಹಾಗೂ ಹೊಸವರ್ಷದ ಶುಭಾಶಯಗಳೊಂದಿಗೆ,

ನಿನ್ನ ವಿಶ್ವಾಸಪೂರ್ವಕ

ಸ್ವಾಮಿ ಯತೀಶ್ವರಾನಂದ

ಸ್ವಿಟ್ಜರ್‌ಲ್ಯಾಂಡ್

ದಿನಾಂಕ ೧೫-೧೦-೧೯೩೬

ಪ್ರೀತಿಯ.....

ನಿನ್ನ ಪತ್ರ ತಲುಪಿತು. ಧನ್ಯವಾದಗಳು. ಯೂರೋಪಿಗೆ ಕಿರು ಪ್ರವಾಸದ ಮೇಲೆ ಆಗಮಿಸಿದ್ದ ಶ್ರೀರಾಮಕೃಷ್ಣ ಮಹಾಸಂಘದ ಶ್ರೇಷ್ಠ ಸ್ನೇಹಿತರಾದ ಮೈಸೂರು ಮಹಾರಾಜರನ್ನು ಭೇಟಿಮಾಡಲು ತುರ್ತಾಗಿ ನಿರ್ಗಮಿಸಬೇಕಾಯಿತು. ಈ ಕಾರಣದಿಂದಾಗಿ ನಿನಗೆ ತಿಳಿಸಿ ಹೊರಡಲಿಕ್ಕೆ ಆಗಲಿಲ್ಲ. ನಾನು ನಿನಗೆ ಪತ್ರ ಬರೆಯಬೇಕೆಂದು ಬಹಳ ಬಾರಿ ಅಂದುಕೊಂಡರೂ ಸಾಧ್ಯವಾಗಲಿಲ್ಲ. ಆದರೆ ನೀವೆಲ್ಲರೂ ಸದಾ ನನ್ನ ನೆನಪಿನಲ್ಲಿರುತ್ತೀರಿ.  ಮತ್ತು ಒಂದಲ್ಲ ಒಂದೆಡೆಯಿಂದ ನಿಮ್ಮ ಕ್ಷೇಮ ಸಮಾಚಾರವು ನನಗೆ ತಿಳಿದು ಬರುತ್ತಿರುತ್ತದೆ.

ನಿನ್ನ ಸಹೋದರನ ಅಸ್ವಸ್ಥತೆಯು ತೀವ್ರವಾಗಿ, ಆತನನ್ನು ಆಸ್ಪತ್ರೆಗೆ ಸೇರಿಸಬೇಕಾಯಿತೆಂದು ತಿಳಿದು ಬಹಳ ದುಃಖವಾಯಿತು. ನೀನು ಸಂಕಟಗಳ ಮೂಲಕ ಸಾಗುತ್ತಿದ್ದೀಯೆ. ನಿನ್ನ ಸ್ಥಿರ ವ್ಯಕ್ತಿತ್ವ ಹಾಗೂ ಭಗವಂತನಲ್ಲಿ ನಿನಗಿರುವ ಶ್ರದ್ಧಾಭಕ್ತಿಯು, ಆತನ ಕೃಪೆಯಿಂದ ಈ ಪರೀಕ್ಷೆಯನ್ನು ಧೈರ್ಯವಾಗಿ ಎದುರಿಸಲು ನಿನಗೆ ಶಕ್ತಿಯನ್ನು ನೀಡುತ್ತವೆ ಮತ್ತು ಇದೆಲ್ಲದರಿಂದ ನೀನು ಇನ್ನೂ ಹೆಚ್ಚು ಮನಶ್ಶುದ್ಧಿಯುಳ್ಳವನಾಗಿ ಹಾಗೂ ಸ್ಥೈರ್ಯವಂತನಾಗಿ ಹೊರಬರುತ್ತೀಯೆಂದು ದೃಢವಾಗಿ ನಂಬಿದ್ದೇನೆ.

ಈ ಜಗತ್ತು ತರಬೇತಿಯ ಕೇಂದ್ರವೇ ಹೊರತು, ಬಹುಜನರು ತಪ್ಪಾಗಿ ಗ್ರಹಿಸಿರುವ ಹಾಗೆ ವಿಲಾಸದ ತಾಣವಲ್ಲ. ಈ ವಿಲಾಸಗಳಲ್ಲಿ ಯಾರು ತಮ್ಮ ಕರ್ತವ್ಯದಿಂದ ನುಸುಳಿಕೊಳ್ಳುತ್ತಾರೋ ಅಥವಾ ಅದನ್ನು ಬೇಕಾಬಿಟ್ಟಿಯಾಗಿ ಮಾಡುತ್ತಾರೋ ಅವರು ತಮ್ಮನ್ನು ತಾವೇ ಬಂಧನದಲ್ಲಿ ಸಿಲುಕಿಸಿಕೊಳ್ಳುತ್ತಾರೆ ಮತ್ತು ತಮ್ಮ ವಿಕಸನಕ್ಕೆ ತಾವೇ ಧಕ್ಕೆ ತಂದುಕೊಳ್ಳುತ್ತಾರೆ. ಯಾವ ಶುದ್ಧಾತ್ಮರು ಜೀವನದ ವಾಸ್ತವಿಕತೆಯನ್ನು ಧೈರ್ಯದಿಂದ ಎದುರಿಸಿ, ತಮ್ಮ ಕರ್ತವ್ಯವನ್ನು ಹೃದಯಪೂರ್ವಕವಾಗಿ, ನಿರ್ಮೋಹದಿಂದ ಭಗವಂತನ ಸೇವೆ ಎಂದು ಮಾಡುತ್ತಾರೊ, ಅವರು ಚಿತ್ತಶುದ್ಧಿ ಹಾಗೂ ಉನ್ನತ ಮಟ್ಟದ ವಿಕಸನವನ್ನು ಹೊಂದುತ್ತಾರೆ. ಇದು ಅವರನ್ನು ಆಧ್ಯಾತ್ಮಿಕ ಜಾಗೃತಿ, ಆಂತರಿಕ ಶಾಂತಿ ಮತ್ತು ಧನ್ಯತೆಗಳೆಡೆಗೆ ಕರೆದೊಯ್ಯುತ್ತದೆ. ನೀನು ಈ ಎರಡನೆಯ ವರ್ಗಕ್ಕೆ ಸೇರಿದವನು ಮತ್ತು ಆ ದಾರಿಯನ್ನು ಅನುಸರಿಸಬೇಕಾದವನು.

ಕೆಲಸ ಮತ್ತು ಪೂಜೆ ಒಟ್ಟೊಟ್ಟಿಗೇ ಸಾಗಬೇಕು. ಪ್ರಾರ್ಥನೆ ಮತ್ತು ಧ್ಯಾನದಿಂದ ಕೂಡಿದ ಭಕ್ತಿಯುತ ಪೂಜೆಯನ್ನು ಭಗವಂತನು ಸ್ವೀಕರಿಸುವಂತೆಯೇ ಒಳ್ಳೆಯ ಸಂಕಲ್ಪದಿಂದ ಮಾಡಿದ ಕೆಲಸವನ್ನೂ ಸಹ ಸ್ವೀಕರಿಸುತ್ತಾನೆ. ನನ್ನ ಗುರುಗಳಾದ ಸ್ವಾಮಿ ಬ್ರಹ್ಮಾನಂದರು ನನಗೀ ಸಲಹೆಯನ್ನಿತ್ತರು—'ಕೆಲಸವನ್ನು ಪ್ರಾರಂಭಿಸುವುದಕ್ಕೆ ಮುಂಚೆ ಭಗವಂತನನ್ನು ಸ್ಮರಿಸಿ, ಅವನಿಗೆ ವಂದನೆಯನ್ನು ಅರ್ಪಿಸು. ಕೆಲಸದ ನಡುವೆಯೂ ಮತ್ತು ಮುಗಿದ ಮೇಲೂ ಸಹ ಹಾಗೆಯೇ ಮಾಡು.' ನಿನ್ನ ಕೈಗಳು ಕೆಲಸದಲ್ಲಿ ನಿರತವಾಗಿರುವಾಗಲೂ ಸಹ, ಮನಸ್ಸಿನಲ್ಲಿಯೇ ದೇವರ ನಾಮವನ್ನು ಜಪಿಸಲು, ಮಂತ್ರವನ್ನು ಉಚ್ಚರಿಸಲು ಅಥವಾ ಪ್ರಾರ್ಥಿಸಲು  ಅಭ್ಯಾಸಮಾಡಿದರೆ ಸಾಧ್ಯವಾಗುತ್ತದೆ. ಈ ರೀತಿಯಲ್ಲಿ ಭಕ್ತನು ತನ್ನೆಲ್ಲ ಕೆಲಸವನ್ನು ಪೂಜೆಯಾಗಿ ಪರಿವರ್ತನೆಗೊಳಿಸಬಹುದು ಮತ್ತು ಹೆಚ್ಚು ಹೆಚ್ಚಾಗಿ ಭಗವಂತನ ಬಳಿಗೆ ಸಾಗಬಹುದು. ಭಗವಂತನ ಸಾಕ್ಷಾತ್ಕಾರಕ್ಕಾಗಿ ನೀನು ಮಾಡುವ ಪ್ರಯತ್ನಗಳೆಲ್ಲವನ್ನೂ ಭಗವಂತನು ಎಲ್ಲ ರೀತಿಯಿಂದಲೂ ಹರಸಲಿ.

ನಾನು ಈ ತಿಂಗಳ ನಾಲ್ಕನೆಯ ವಾರದಲ್ಲಿ ಜುರಿಚ್‌ನಲ್ಲಿ ಇರಬಹುದು. ದೈವೇಚ್ಛೆಯಿದ್ದಲ್ಲಿ ಕೆಲವು ತಿಂಗಳುಗಳ ಕಾಲ ನಿರಂತರವಾಗಿ ಅಲ್ಲಿಯೇ ಇರುತ್ತೇನೆ. ನಾನು ಅಲ್ಲಿ ಕೆಲವೊಂದು ಕಾರ್ಯಗಳನ್ನು ಮಾಡಲೇಬೇಕು. ಸ್ವಾಮಿ ವಿವೇಕಾನಂದರು ಬರೆದಿರುವ ಯೋಗದ ಮೇಲಿನ ಮೂರು ಪುಸ್ತಕಗಳು  ಜರ್ಮನ್ ಭಾಷೆಗೆ ಭಾಷಾಂತರಗೊಂಡಿವೆ. ಅವನ್ನು ಕ್ರಿಸ್‌ಮಸ್ ನಂತರ ಅಚ್ಚಿಗೆ ಕಳುಹಿಸುತ್ತೇನೆ. ಈ ವಿಷಯವನ್ನು ಕೇಳಿ ನೀನು ಸಂತೋಷ ಪಡಬಹುದು. ಫ್ರೆಂಚ್ ಭಾಷೆಯಲ್ಲಿ ಪ್ರಸ್ತುತ ಪ್ರಕಟನೆಯ ಕಾರ್ಯ ಬಹಳ ಕ್ಷಿಪ್ರ ಗತಿಯಲ್ಲಿ ಸಾಗುತ್ತಿದೆ.

ನಿನಗೆ ಸಾಧ್ಯವಾದಾಗ ಪತ್ರ ಬರೆ. ಅದಕ್ಕಾಗಿ ಅವಸರ ಪಡಬೇಡ. ಜುರಿಚ್ ವಿಳಾಸ ಈಗ ನನಗೇ ತಿಳಿದಿಲ್ಲದ ಕಾರಣ, ಮುಂದೆ ಅದನ್ನು ತಿಳಿಸುತ್ತೇನೆ. ನನ್ನ ಸ್ನೇಹಿತರು ನನಗಾಗಿ ಒಂದು ಒಳ್ಳೆಯ ಜಾಗವನ್ನು ಅಲ್ಲಿ ಹುಡುಕುತ್ತಿದ್ದಾರೆ.

ನಿನ್ನ ಆದರ ಮತ್ತು ಶುಭಾಶಯಗಳಿಗಾಗಿ ಧನ್ಯವಾದಗಳು. ದಯವಿಟ್ಟು ನನ್ನ ಶುಭಾಶಯಗಳನ್ನು ಸ್ವೀಕರಿಸು ಮತ್ತು ಅದನ್ನು F.T ಹಾಗೂ ಎಲ್ಲ ಸ್ನೇಹಿತರಿಗೂ ತಿಳಿಸು.

ಭಗವಂತನ ಕೃಪೆಯಿಂದ ನೀನು ಸಂಪೂರ್ಣ ಆರೋಗ್ಯ ಮತ್ತು ಉತ್ಸಾಹಪೂರ್ಣವಾಗಿರುವೆ ಎಂಬ ನಂಬಿಕೆಯೊಂದಿಗೆ,

ನಿನ್ನ ವಿಶ್ವಾಸಪೂರ್ವಕ

ಸ್ವಾಮಿ ಯತೀಶ್ವರಾನಂದ

ಬೇಲೂರು ಮಠ
ದಿನಾಂಕ ಮೇ, ೧೯೫೧

ಪ್ರೀತಿಯ.....

ಭಗವಂತನು ನಿನ್ನನ್ನು ಮತ್ತು ಲ.... ರನ್ನು ಹರಸಲಿ. ನೀನು ಆರೋಗ್ಯದಿಂದಿರುವೆ ಹಾಗೂ ಲ.... ರವರು ಗುಣಮುಖರಾಗುತ್ತಿದ್ದಾರೆ ಎಂದು ನಂಬಿದ್ದೇನೆ.

ಅವರು ನನಗೆ ಏಕೆ ಪತ್ರ ಬರೆಯಲಿಲ್ಲವೆಂದು ಕಾತರಗೊಂಡಿದ್ದೆ. ನಿನ್ನ ಹಿಂದಿನ ಪತ್ರದಿಂದ ಕಾರಣ ತಿಳಿಯಿತು. ಇತ್ತೀಚೆಗೆ ನ್ಯೂಯಾರ್ಕಿನ ಗೆಳೆಯರೊಬ್ಬರು ಅವರು ಆಸ್ಪತ್ರೆಗೆ ಸೇರಿರುವ ವಿಷಯವನ್ನು ಬರೆದಿದ್ದರು. ನಾನು ಲ.... ರನ್ನು ನೋಡಿದ್ದಾಗಲೇ ಅವರು ತಮ್ಮ ಅಮೆರಿಕದ ಹೊಸ ವಾತಾವರಣಕ್ಕೆ ಹೊಂದಿಕೊಳ್ಳಲಾರರೆಂದು ಅಭಿಪ್ರಾಯಪಟ್ಟಿದ್ದೆ. ಎಲ್ಲವೂ ಒಳ್ಳೆಯದೇ ಆಗಲೆಂದು ನಾನು ಆಶಿಸಿದ್ದರೂ ಅದು ಹಾಗಾಗಲಿಲ್ಲ. ಆಸ್ಪತ್ರೆಯಿಂದ ಅವರು ಹೊರಬಂದ ಮೇಲೆ ಏನು ಮಾಡಬೇಕೆಂಬುದನ್ನು ಈಗ ಅವರಿಗೆ ಚಿಕಿತ್ಸೆ ನೀಡುತ್ತಿರುವ ವೈದ್ಯರ ಸಲಹೆಯ ಮೇರೆಗೆ ನಿರ್ಧರಿಸಬೇಕು. ಅವರು ಪ್ರೀತಿಗಾಗಿ ಹಂಬಲಿಸುತ್ತಿದ್ದಾರೆ. ಅದು ತೀರ ಸಹಜ ಕೂಡ. ಬಹುಶಃ ನೀವಿಬ್ಬರೂ ಒಟ್ಟಿಗೇ ಎಲ್ಲಾದರೂ ಜೀವಿಸಬೇಕಾಗಬಹುದು.

ಶ್ರೀರಾಮಕೃಷ್ಣರು ನಮಗೆ ಹೊಡೆತಗಳನ್ನೀಯುತ್ತಾರೆ ಎಂಬ ವಿಷಯ ಅಷ್ಟೊಂದು ಖಚಿತವಿಲ್ಲ. ನಾವು ಮಾಡಿದ ಕರ್ಮವೇ ನಮಗೆ ಸುಖ ದುಃಖಗಳನ್ನು ತರುತ್ತದೆ. ಆದ್ದರಿಂದ ಭಗವಂತನನ್ನು ದೂಷಿಸುವುದಕ್ಕೆ ಬದಲಾಗಿ ಈ ದ್ವಂದ್ವಗಳಿಂದ ಪ್ರಯೋಜನವನ್ನು ಪಡೆಯೋಣ. ಸದಾ ಬದಲಾವಣೆಗೆ ಅತೀತನಾದ ಭಗವಂತನಲ್ಲಿ ಮನಸ್ಸಿಡು ಮತ್ತು ವೈರಾಗ್ಯವಂತನಾಗು.

'ಭಗವಂತ ನಮ್ಮಿಂದ ಬೇರೆಯಲ್ಲ' ಎಂದು ಅನುಭವಕ್ಕೆ ಬರುವುದು ವೈರಾಗ್ಯ ನಮಗೆ ಬಂದ ನಂತರವೇ. ಅವನು 'ನಮ್ಮಾತ್ಮದ ಆತ್ಮ' ಮತ್ತು ಸೃಷ್ಟಿಕರ್ತ ತಂದೆ, ತಾಯಿ ಮತ್ತು ಸರ್ವಸ್ವವೂ ಅವನೇ. ಅವನು ನಮ್ಮನ್ನು ಕಷ್ಟಗಳಿಗೆ ಗುರಿಪಡಿಸಿದರೂ ಅದು ನಮ್ಮ ಒಳ್ಳೆಯದಕ್ಕೇ. ವಚನವೇದದ ಕೊನೆಯ ಅಧ್ಯಾಯವನ್ನು ಅಧ್ಯಯನ ಮಾಡು. ಕ್ಯಾನ್ಸರ್‌ನಿಂದ ನರಳುತ್ತಿದ್ದರೂ ಶ್ರೀರಾಮಕೃಷ್ಣರು ಹೇಗೆ ಸಂಪೂರ್ಣ ದಿವ್ಯ ಸಾನ್ನಿಧ್ಯ ಮತ್ತು ಶಾಂತಿಯಲ್ಲಿ ನೆಲೆಸಿದ್ದರು ಎಂಬುದನ್ನು ಮನಗಂಡು ಅದನ್ನು ಮೆಚ್ಚಲು ಪ್ರಯತ್ನಿಸು.

ಶ್ರೀರಾಮಕೃಷ್ಣರ ಶ್ರೇಷ್ಠ ಶಿಷ್ಯರಲ್ಲಿ ಒಬ್ಬರಾಗಿದ್ದ ಸ್ವಾಮಿ ತುರೀಯಾನಂದರು ಬಹಳಷ್ಟು ಶಾರೀರಿಕ ಯಾತನೆಗಳಿಂದ ನರಳಿದವರು. ಅವರು ಈ ಬಂಗಾಳಿ ಗೀತೆಯೊಂದನ್ನು ಹಾಡುತ್ತಿದ್ದರು:

*ಮಂಗಲಮಯನಾದ ಓ ಪ್ರಭು!*
*ನೀನು ಸದಾ ಒಳ್ಳೆಯವನು*
*ಭಾವಿಸುವೆ ಇದನು ಪ್ರತಿಕ್ಷಣವೂ*
*ನಲಿವು ಅಥವಾ ನೋವನೇ ಇತ್ತರೂ ನೀನು.*
*ನೀನೆಂತಾದರೂ ನನ್ನನಿರಿಸಿದರೂ*
*ಭಾವಿಸುವೆ ನೀನೆಂದೂ ನನ್ನ ಕೈಬಿಡೆ ಎಂದು*
*ಪ್ರಭು, ದರುಶನ ನೀಡು ಈ ಹೃದಯದಲಿ*
*ಆಗ ಮುಗಿವುದೆಲ್ಲ ಶುಭದಲಿ.*

ಜಗನ್ಮಾತೆಯ ಆರಾಧಕನೋರ್ವನು, 'ತಾಯೆ, ನೀನು ನನ್ನನು ತುಂಡು-ತುಂಡಾಗಿ ಕೊಚ್ಚಿದರೂ ಸರಿಯೇ. ನನಗಾಶ್ರಯ ನೀನು ಮಾತ್ರವೇ' ಎಂದು ಹೇಳಿರುವನು. ಹೀಗೆ ಇರಬಲ್ಲೆಯಾ ನೀನು?

ಬೇಲೂರು ಮಠಕ್ಕೆ ಮಾರ್ಚ್ ೧೫ರಂದು ಹಿಂತಿರುಗಿದೆ. ನಮ್ಮ ಪ್ರಭುವಿನ ಜನ್ಮಸ್ಥಳ ಕಾಮಾರಪುಕುರದಲ್ಲಿ ನಿರ್ಮಿತವಾಗಿರುವ ಶ್ರೀರಾಮಕೃಷ್ಣ ದೇಗುಲದ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳಲು ನಾವೆಲ್ಲರೂ ಕಾತರದಿಂದ ಇದ್ದೇವೆ. ಪ್ರತಿಷ್ಠಾಪನಾ ಮಹೋತ್ಸವವು ಮೇ ೧೧ರಂದು ನೆರವೇರಲಿದೆ.

ನಾನು ಆರೋಗ್ಯವಾಗಿದ್ದೇನೆ. ನಿನಗೆ ನನ್ನ ಶುಭಹಾರೈಕೆಗಳು ಮತ್ತು ನಿನ್ನ ಸ್ನೆಹಿತರೆಲ್ಲರಿಗೂ ನನ್ನ ಹಾರೈಕೆಗಳನ್ನು ತಿಳಿಸು. ದಯವಿಟ್ಟು ನಿಮ್ಮೆಲ್ಲರ ವಿಚಾರವನ್ನು ಆಗಾಗ ತಿಳಿಸುತ್ತಿರು.

ನಿನ್ನ ವಿಶ್ವಾಸಪೂರ್ವಕ
ಸ್ವಾಮಿ ಯತೀಶ್ವರಾನಂದ

ಬೆಂಗಳೂರು ಶ್ರೀರಾಮಕೃಷ್ಣ ಆಶ್ರಮ,

ದಿನಾಂಕ ೨೭-೦೯-೫೫

ಪ್ರೀತಿಯ.....

ನಿನ್ನ ದೇಹ ಮತ್ತು ಮನಸ್ಸುಗಳೆರಡೂ ಒಂದು ರೀತಿಯ ಉದ್ವೇಗಕ್ಕೆ ಒಳಪಟ್ಟಿವೆ ಎಂದೆನಿಸುತ್ತದೆ. ಸಾಕಷ್ಟು ಪೌಷ್ಟಿಕ ಆಹಾರ ಮತ್ತು ವಿಶ್ರಾಂತಿಯನ್ನು ತೆಗೆದುಕೋ. ಚೆನ್ನಾಗಿ ನಿದ್ದೆ ಮಾಡು. ಅನಂತತೆಯ ಮೇಲೆ ಧ್ಯಾನಿಸು ಮತ್ತು ಉದಾತ್ತ ಭಾವವನ್ನು ಹೊಂದು. ಆಗ ಎಲ್ಲ ರೀತಿಯ ತೊಂದರೆಗಳೂ ನಿವಾರಣೆಯಾಗುತ್ತವೆ.

ಭಗವಂತನಲ್ಲಿ ನಿನ್ನವ

ಸ್ವಾಮಿ ಯತೀಶ್ವರಾನಂದ

ಬೆಂಗಳೂರು

ದಿನಾಂಕ ೨೩-೧೧-೫೫

ಪ್ರೀತಿಯ.....

.....ಭಗವಾನ್ ಶ್ರೀರಾಮಕೃಷ್ಣದೇವರನ್ನು ಮತ್ತು ಶ್ರೀಮಾತೆಯವರನ್ನು ಪ್ರಾರ್ಥಿಸು. 'ಉಜ್ವಲ ಮತ್ತು ಅಮೋಘವಾದ ಜೀವನ' ಎಂದು ಯಾವುದನ್ನು ನೀನು ಕರೆದಿದ್ದೀಯೋ ಅದನ್ನು ಅವರು ಮಾತ್ರವೇ ದಯಪಾಲಿಸಬಲ್ಲರು. ಬಹುಶಃ ನಿನಗೆ ನಿನ್ನ ಜೀವನದಲ್ಲಿ ಹೊಸ ಅಧ್ಯಾಯವನ್ನು ಪ್ರಾರಂಭಿಸಲು ಅವಕಾಶ ದೊರೆಯಬಹುದು.

ಭಗವಂತನಲ್ಲಿ ನಿನ್ನವ

ಸ್ವಾಮಿ ಯತೀಶ್ವರಾನಂದ

ಬೆಂಗಳೂರು

ದಿನಾಂಕ ೨೩-೧೧-೫೫

ಪ್ರೀತಿಯ.....

...... ಅತೀವ ಸ್ವ-ವಿಮರ್ಶೆಯಿಂದ ನಿನ್ನನ್ನು ನೀನೇ ಬಲಹೀನನನ್ನಾಗಿ ಮಾಡಿಕೊಳ್ಳಬೇಡ. ನೀನು ಪಡೆದಿರುವ ಮಂತ್ರವು ನಿನ್ನನ್ನು ದೈಹಿಕವಾಗಿ ಹಾಗೂ ಆಧ್ಯಾತ್ಮಿಕವಾಗಿ ಪುನಶ್ಚೇತನಗೊಳಿಸುವಂತಹ ಅಗಾಧ ಶಕ್ತಿಯನ್ನು ಹೊಂದಿದೆ. ಇದು ನಿನಗೆ ಹೊಸಶಕ್ತಿ ಮತ್ತು ಭರವಸೆಯನ್ನೂ ಸಹ ನೀಡಬಲ್ಲದು.

ಶಾಂತಿಯನ್ನು ಪಡೆಯಲು ನನಗೆ ತಿಳಿದಿರುವುದು ಒಂದೇ ಮಾರ್ಗ.ಅದು ಆಧ್ಯಾತ್ಮಿಕ ಸಾಧನೆ—ಧ್ಯಾನ ಮತ್ತು ಪ್ರಾರ್ಥನೆಗಳ ಮೂಲಕ ಮಾತ್ರ. ಈ ಸಲಹೆಯನ್ನೇ ನಾನು ಎಲ್ಲರಿಗೂ ಕೊಡುವುದು.

ಭಗವಂತನಲ್ಲಿ ನಿನ್ನವ

ಸ್ವಾಮಿ ಯತೀಶ್ವರಾನಂದ

ಬೆಂಗಳೂರು

ದಿನಾಂಕ ೨೫-೦೭-೫೬

ಪ್ರೀತಿಯ.....

............. 'ಪ್ರಪಂಚದಾದ್ಯಂತ ಚದುರಿರುವ ಭಕ್ತರೆಲ್ಲರೂ ನನ್ನೊಂದಿಗೆ ಮಾನಸಿಕವಾಗಿ ಒಂದು ಗೊತ್ತಾದ ಸಮಯದಲ್ಲಿ ಶ್ರುತಿಗೊಂಡರೆ, ಆಗ ನಾನು ಪ್ರಶಾಂತ ಸ್ಪಂದನಗಳನ್ನು ಎಲ್ಲರಿಗೂ ಒಂದೇ ಸಮಯದಲ್ಲಿ ಸೇರುವಂತೆ ಬಿತ್ತರಿಸಲು ಸಾಧ್ಯವಾಗುತ್ತದೆ ಮತ್ತು ಇದರಿಂದ ನಾನು ಅನೇಕ ಪತ್ರಗಳನ್ನು ಬರೆಯಬೇಕಾದ ಪ್ರಯಾಸದಿಂದ ಪಾರಾಗಬಹುದು.....' ಎಂದು ಕೆಲವೊಮ್ಮೆ ಚಿಂತಿಸುತ್ತಿರುತ್ತೇನೆ...

ನಾನು ಒಬ್ಬ ಹುಟ್ಟು ಹೋರಾಟಗಾರ. ಆದ್ದರಿಂದ ಎಷ್ಟೇ ತೊಂದರೆಗಳು ಬಂದರೂ ಅವುಗಳನ್ನು ಎದುರಿಸಲು ಸಿದ್ಧನಾಗಿದ್ದೇನೆ ಮತ್ತು ಯಾವ ಭಗವಂತನಿಗೆ ಸೇವೆ ಸಲ್ಲಿಸಲು ನಾವು ಪ್ರಯತ್ನಿಸುತ್ತಿದ್ದೇವೆಯೋ, ಅವನ ಕೃಪೆಯ ಮೂಲಕ ಅವುಗಳಿಗೆ ಪರಿಹಾರವನ್ನು ಕಂಡುಕೊಳ್ಳುತ್ತೇನೆ......

ಭಗವಂತನಲ್ಲಿ ನಿನ್ನವ

ಸ್ವಾಮಿ ಯತೀಶ್ವರಾನಂದ

ಬೆಂಗಳೂರು ಶ್ರೀರಾಮಕೃಷ್ಣ ಆಶ್ರಮ,

ದಿನಾಂಕ ೨೮-೧೦- ೫೮

ಪ್ರೀತಿಯ.....

ಆಗಸ್ಟ್ ೧೮ರಂದು ಹಾಗೂ ಅಕ್ಟೋಬರ್ ೨೪ರಂದು ನೀನು ಬರೆದ ಪತ್ರಗಳು ತಲುಪಿದವು. ನೀನು ಕಳುಹಿಸಿದ ಚಿತ್ರದ ಪೋಸ್ಟ್‌ಕಾರ್ಡ್‌ನ್ನು ನೋಡಿ ಸಂತೋಷವಾಯಿತು. ನೀನು ವಿಸ್‌ಬೇಡನ್‌ನಲ್ಲಿ ರಜಾದಿನಗಳನ್ನು ಸಂತೋಷದಿಂದ ಕಳೆದು ಮತ್ತೆ ಹೆಚ್ಚು ಆರೋಗ್ಯ ಹಾಗೂ ಉಲ್ಲಾಸಭರಿತನಾಗಿ ಹಿಂತಿರುಗಿ ಬಂದುದು ಸಂತೋಷದ ವಿಷಯ.

ಭಕ್ತರ ತೊಂದರೆಗಳಿಗೆ ಸಂಬಂಧಪಟ್ಟಂತೆ ಅವರಿಗೆ ನಿರಂತರವಾಗಿ ಸಲಹೆಗಳನ್ನು ಕೊಡುತ್ತಲೇ ಇರುವುದು ಉಪಯೋಗವಿಲ್ಲದ್ದು. ಇದಕ್ಕೆ ಬದಲಾಗಿ ನಾನು 'ಅವರ ಅಂತರ್ಯದಲ್ಲೇ ನೆಲೆಸಿರುವ ಭಗವಂತನೇ ಅವರಿಗೆ ಮಾರ್ಗದರ್ಶಿಯಾಗಲಿ ಹಾಗೂ ಅವರ ಅಂತಃಚೈತನ್ಯವನ್ನು ಉದ್ದೀಪನಗೊಳಿಸಲಿ'—ಎಂದು ಭಗವಂತನಲ್ಲಿ ಪ್ರಾರ್ಥಿಸಲು ಹೆಚ್ಚು ಇಚ್ಛಿಸುತ್ತೇನೆ. ಆದ್ದರಿಂದ ದಯವಿಟ್ಟು ಭಗವಂತನೆಡೆಗೆ ಮಾರ್ಗದರ್ಶನಕ್ಕಾಗಿ ಮತ್ತು ಬೆಳಕಿಗಾಗಿ ಹೆಚ್ಚು ಹೆಚ್ಚಾಗಿ ತಿರುಗಲು ಕಲಿ. ಈ ಜೀವನ-ನಾಟಕದಲ್ಲಿ ನಿನ್ನ ಪಾತ್ರವನ್ನು ನಿನಗೆ ಸಾಧ್ಯವಾದಷ್ಟೂ ಉನ್ನತ ಮಟ್ಟದಲ್ಲಿ ನಿರ್ವಹಿಸು. ಇದು ನಾನು ನಿನಗೆ ಬರಿ ಸಲಹೆಗಳನ್ನು ಕೊಡುವುದಕ್ಕಿಂತ ಉತ್ತಮ ಮಾರ್ಗವಲ್ಲವೆ?....

ನಿನಗೆ, ನಿನ್ನ ಕುಟುಂಬವರ್ಗದ ಎಲ್ಲರಿಗೆ ಹಾಗೂ ನಿನ್ನ ಸ್ನೇಹಿತರಿಗೆ ನನ್ನ ಶುಭ ಹಾರೈಕೆಗಳೊಂದಿಗೆ,

ಭಗವಂತನಲ್ಲಿ ನಿನ್ನವ

ಸ್ವಾಮಿ ಯತೀಶ್ವರಾನಂದ